156ನೇ ಸಂ 72 = (130) 03/09

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿ ಗೌಡ ಇವರು ನಿಯಮ 72ರಡಿ ನೀಡಿರುವ ಸೂಚನೆಗೆ ಮಾಹಿತಿ

**ಸೂಚನೆ:-**

ಹಾಸನ ಜಿಲ್ಲೆ ಬೇಲೂರು ತಾಲ್ಲೂಕು, ಅರೆಹಳ್ಳಿ ಸ.ನಂ. 23/3 ಮತ್ತು 20/2 ರಲ್ಲಿ, Tricolour Investment and Properties Pvt. Ltd (Indian Estate) ಎಂಬ ಸಂಸ್ಥೆಯು ಅನಧಿಕೃತವಾಗಿ ಫಾರಂ ಲ್ಯಾಂಡ್ ಅನ್ನು ನಿರ್ಮಿಸಿ ಮಾರಾಟ ಮಾಡುವ ನೆಪದಲ್ಲಿ ಜನರಿಗೆ ಮೋಸ ಮಾಡುತ್ತಲಿದ್ದು, ಈ ಸಂಸ್ಥೆಯ ವಿರುದ್ಧ ಅರೆಹಳ್ಳಿ ಪೋಲೀಸ್ ಠಾಣೆ ಹಾಗೂ ಹಾಸನದ ಸೆನ್ ಪೋಲೀಸ್ ಠಾಣೆಗಳಲ್ಲಿ ಹಲವಾರು ದೂರುಗಳು ದಾಖಲಾಗಿರುತ್ತವೆ. ಸದರಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮ್ಯಾನೇಜರ್ ರವರುಗಳು ಜನರಿಂದ ಮುಂಗಡವಾಗಿ ಲಕ್ಷಾಂತರ ರೂ.ಗಳ ಹಣ ಪಡೆದು ಕರಾರು ಮಾಡಿಕೊಟ್ಟು ನಂತರ ಫಾರಂ ಲ್ಯಾಂಡ್ ಅನ್ನು ಅವರ ಹೆಸರಿಗೆ ನೊಂದಾವಣೆ ಮಾಡಿಕೊಡದೇ ಮೋಸ ಮಾಡಿರುವುದಾಗಿ ತಿಳಿದುಬಂದಿರುತ್ತದೆ. ಒಂದು ಕಡೆ ಫಾರಂ ಲ್ಯಾಂಡ್ ಸಹ ಇಲ್ಲದೇ, ಕೊಟ್ಟಿರುವ ಹಣವೂ ಹಿಂದಿರುಗಿ ಬರದೇ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದು, ಸಂಕಷ್ಟಕ್ಕೀಡಾಗಿದ್ದಾರೆ. ಈ ಸಂಸ್ಥೆಯ ವಿರುದ್ಧ ಹಲವಾರು ದೂರು ದಾಖಲಾಗಿದ್ದರೂ, ಹಾಸನ ಜಿಲ್ಲಾ ಪೋಲೀಸ್ ರವರು ಯಾವುದೇ ಕ್ರಮ ಜರುಗಿಸದೇ, ಈ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಸುಮಾರು 1 ವರ್ಷದಿಂದ ತಪ್ಪಿಸಿಕೊಂಡಿರುವುದಾಗಿ ಆತನು ಸಿಗುತ್ತಿಲ್ಲವೆಂದು ಸುಳ್ಳು ಹೇಳಿ ಸ್ಥಳೀಯ ರೈತರಿಗೆ ಹಾಗೂ ಜನರಿಗೆ ನ್ಯಾಯ ದೊರಕಿಸಿಕೊಡದೇ ಸ್ಥಳೀಯ ಪೊಲೀಸ್‌ರವರು ಈ ಕಂಪನಿಯೊಂದಿಗೆ ಶಾಮೀಲಾಗಿರುವ ಅನುಮಾನ ಮೂಡುತ್ತದೆ.

ಆದುದರಿಂದ, ನೊಂದ ರೈತರಿಗೆ ಹಾಗೂ ಜನರಿಗೆ ಫಾರಂ ಲ್ಯಾಂಡ್ ಅಥವಾ ಅವರ ಹಣ ಹಿಂದಿರುಗಿಸುವ ಬಗ್ಗೆ ಸಂಸ್ಥೆಯ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ಸರ್ಕಾರ ನ್ಯಾಯ ಒದಗಿಸಬೇಕೆಂದು ಕೋರಿರುವ ಬಗ್ಗೆ.

**ಉತ್ತರ:-**

ಬೇಲೂರು ತಾಲ್ಲೂಕು, ಅರೇಹಳ್ಳಿ ಹೋಬಳಿ, ಅರೇಹಳ್ಳಿ ಗ್ರಾಮದ ಸ.ನಂ 20/2 ರಲ್ಲಿ 0-30 ಗುಂಟೆ ಜಮೀನು ಶ್ರೀ ವಿಜಯ ಬಿನ್ ರಾಮಾಚಾರಿ ರವರ ಹೆಸರಿನಲ್ಲಿದ್ದು, ಖಾತೆದಾರರೇ ಸ್ವಾಧೀನಾನುಭವದಲ್ಲಿರುತ್ತಾರೆ ಹಾಗೂ ಸ.ನಂ 23ರ ಜಮೀನು ಸರ್ಕಾರಿ ಗೋಮಾಳ ಜಮೀನಾಗಿರುತ್ತದೆ. ಸದರಿ ಅರೇಹಳ್ಳಿ ಹೋಬಳಿ, ಅರೇಹಳ್ಳಿ ಗ್ರಾಮದ ಸ.ನಂ 20/2 ಹಾಗೂ ಸ.ನಂ 23 ರಲ್ಲಿನ ಜಮೀನುಗಳು Tricolour Investment and Properties Pvt. Ltd (Indian Estate) ಎಂಬ ಸಂಸ್ಥೆಯ ಹೆಸರಿನಲ್ಲಿ ಇರುವುದಿಲ್ಲ.

**(ಆರ್‌ಡಿ 59 ಎಲ್‌ಜಿಹೆಚ್ 2025)**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**